ನೋಡಿತು ಗೃಧ್ರ. ಅವಳಿಗೆ ಅದರ ಉದ್ದೇಶ ಗೊತ್ತಾಗುತ್ತಿತ್ತು. ಇನ್ನೂ ಕತ್ತಲಾಗಿಲ್ಲ, ಹೊರಗೆ ಬೆಳಕಿದೆ, ಇಷ್ಟು ಬೇಗ ಹೊರಟದ್ದೇ ಎನ್ನುವ ಇಶಾರೆ ಅದು. ಬೆಳಕಿತ್ತು ನಿಜ. ಮೋಡ ಕಟ್ಟಿದ ಆಕಾಶದಿಂದ ಮಳೆ ನೀರು ಜಿನುಗುತ್ತಿದ್ದರೂ ಕತ್ತಲು ಹೇಳುವಷ್ಟಿರಲಿಲ್ಲ. ಆದರೆ ಯಾವ ಕ್ಷಣಕ್ಕೂ ಮಳೆ ಹೊಡೆಯಬಹುದೆನ್ನಿಸಿ ಅದರ ಮೊದಲು ಆಟೊ ಹಿಡಿಯಬೇಕೆಂದು ಸರಸರ ಹೆಜ್ಜೆ ಹಾಕಿದಳು. ಮಳೆ ಇಲ್ಲದ ದಿನಗಳಲ್ಲಾದರೆ ಅನತಿ ದೂರದಲ್ಲಿರುವ ಬಸ್ ಸ್ಟಾಪಿಗೆ ಹೋಗಿ, ಬಸ್ ಕಾದು, ಆರೇಳು ಕಿಲೋಮೀಟರ್ ದೂರವಿರುವ 'ಡೇ ಕೇರ್' ಹತ್ತಿರ ಇಳಿದು ಮಗಳನ್ನು ಎತ್ತಿಕೊಂಡು ಹೋಗುವಷ್ಟು ಸಮಯ ಸಿಗುತ್ತಿತ್ತು. ಅಲ್ಲಿಂದ ಅರ್ಧ ಕಿ.ಮೀ. ದೂರ ಮನೆ.

ಸಾಧಾರಣವಾಗಿ ಗಂಡ ಊರಲ್ಲಿದ್ದರೆ ಅವಳಿಗೆ ಅಷ್ಟು ಧಾವಂತವಿರುವುದಿಲ್ಲ. ಆದರೆ ಅವನು ಕೆಲಸದ ಮೇಲೆ ಮೈಸೂರಿಗೋ ದಾವಣಗೆರೆಗೋ ಹೋಗಿದ್ದಾನೆ. 'ಬರುವಾಗ ರಾತ್ರಿಯ ಹತ್ತು ಗಂಟೆಯಾದರೂ ಆಗಬಹುದು, ಊಟಕ್ಕೆ ಕಾಯಬೇಡ' ಎಂದು ಹೇಳಿಯೇ ಹೋಗಿದ್ದಾನೆ. ಸಮಸ್ಯೆ ಇರುವುದು 'ಡೇ ಕೇರ್'ನ ಒಡತಿಯದ್ದೇ. ಏಳು ಗಂಟೆಗೆ ಮಗುವನ್ನು ಕರಕೊಂಡು ಹೋಗಬೇಕು ಅಂತ ಸೇರಿಸಿಕೊಳ್ಳುವಾಗಲೇ ಕಂಡೀಶನ್ ಹಾಕಿದ್ದಳು. 'ಡೇ ಕೇರ್'ನಲ್ಲಿದ್ದ ಕೊನೆಯ ಮಗುವನ್ನು ಅವರವರ ಅಮ್ಮ ಅಪ್ಪಂದಿರು ಮನೆಗೆ ಒಯ್ದ ಮೇಲೆ ಅವಳು ಬೀಗ ಹಾಕಿ ತನ್ನ ಮನೆಗೆ ಹೋಗಲು ಸ್ಕೂಟರ್ ಸ್ಟಾರ್ಟ್ ಮಾಡುತ್ತಿದ್ದಳು. ಏಳು ಗಂಟೆಯ ಬಳಿಕ ಬರಿಯ ಐದು ನಿಮಿಷ ತಡವಾದರೂ ಚಡಪಡಿಸುತ್ತಿದ್ದ ಮೇಮ್ ಕ್ರಮೇಣ ಏಳೂವರೆಯ ತನಕ ಕಾಯತೊಡಗಿದ್ದಳು. ತಡವಾದರೆ ಹೆಚ್ಚು ಕಿರಿಕಿರಿ ಮಾಡುವುದನ್ನು ಬಿಟ್ಟಿದ್ದರೂ ಮುಖ ಸಿಂಡರಿಸಿ ಕೊಳ್ಳುವುದನ್ನು ಬಿಟ್ಟಿರಲಿಲ್ಲ. 'ಸಾರಿ ಮೇಮ್' ಎಂದು ಉದ್ಗಾರ ತೆಗೆದರೆ ಕೇಳಿಸಿಯೇ ಇಲ್ಲವೆನ್ನುವಂತೆ ಮುಖ ತಿರುಗಿಸಿ ನಿಂತಾಗ ಬೇರೇನೂ ಮಾಡಲು ಸಾಧ್ಯವಾಗದೇ ಅವಳು ತಪ್ಪಿತಸ್ಥ ಮನೋಭಾವದಿಂದ ಮಗುವನ್ನು ಕರೆದುಕೊಂಡು ಹೊರಬೀಳುವುದು ಮಾಮೂಲಾಗಿತ್ತು. ಈಗ ಮಗುವನ್ನೆತ್ತಿಕೊಳ್ಳುವ ಸಮಯ ಅನೌಪಚಾರಿಕವಾಗಿ ಏಳುವರೆಯಾದದ್ದು ಸಹಜವಾಗಿ ಹೋಗಿದೆ.

ಆಫೀಸಿನಿಂದ ಹೊರಬಿದ್ದು ನಡೆಯುತ್ತಿರುವಾಗ ಐದಾರು ಮಾರು ದೂರದಲ್ಲಿ ನಿಂತ ಆಟೊ ನೋಡಿ ಸರಸರ ಅದರತ್ತ ಹೆಜ್ಜೆ ಹಾಕಿದಳು. ಆಟೊ ರಸ್ತೆಯ ತೀರ ಎಡಕ್ಕಿತ್ತು. ಹುಲ್ಲು ಬೆಳೆದ ಅಂಚಿನಲ್ಲಿ ಗಟಾರವಿದ್ದುದರಿಂದ ಎಡಗಡೆಯಲ್ಲಿ ಕಷ್ಟಪಟ್ಟು ದಾಟಿ ಅವಳು ಆಟೊದವನ ಎದುರು ನಿಂತಳು. 'ಕೆಂಪೇಗೌಡನಗರ ಬರ್ತೀಯೇನಪ್ಪ?' ಎಂದು ಕೇಳಿದಳು. ಆಟೊ ಡ್ರೈವರ್ ಆ ದಿನದ ಕಮಾಯಿಯನ್ನು ಜೇಬಿನಿಂದ ಹೊರತೆಗೆದು ಒಟ್ಟು ಹಾಕಿ ಎಣಿಸುತ್ತಾ ಇದ್ದ. ಅವಳ ಪ್ರಶ್ನೆ ಅವನ ಎಣಿಕೆಯನ್ನು ತಡಬಡಾಯಿಸಿರಬೇಕು. ನೋಟುಗಳನ್ನು ಕೈಯಲ್ಲಿ ಹಿಡಿದ ಹಾಗೆಯೇ ತಲೆ ಎತ್ತಿ ಅವಳನ್ನು ಆಪಾದಮಸ್ತಕ ದಿಟ್ಟಿಸಿ ನೋಡಿದ.

'ಕೆಂಪೇಗೌಡನಗರ?'

'ಇಲ್ಲ.'

ಅವನು ಮತ್ತೆ ತನ್ನ ಕಾಯಕದಲ್ಲಿ ಮಗ್ನನಾದ. ಅವರನ್ನು ಮತ್ತೆ ಕೇಳುವುದು ವ್ಯರ್ಥ ಅಂತ ಅವಳ ಹಿಂದಿನ ಅನುಭವ ಕಲಿಸಿತ್ತು. ಮುಂದಕ್ಕೆ ಹೋಗಿ ರಸ್ತೆಯ ಡಾಮರಿನ ಮೇಲೆ ಬಂದಳು. ಒಮ್ಮೆ ಹಿಂದೆ ಮುಂದೆ ಕಣ್ಣು ಹಾಯಿಸಿದಳು. ತಾನು ಹೋಗುವ ದಿಕ್ಕಿನಲ್ಲಿ ಹಿಂದಿನಿಂದ ಯಾವುದೇ ಆಟೊ ಬರುವುದು ಕಾಣಿಸಲಿಲ್ಲ. ಬದಲಾಗಿ ನಾಲ್ಕಾರು ಕಾರುಗಳು, ಏಳೆಂಟು ಬೈಕ್‌ಗಳು ಅವಳನ್ನು ಸರ್ರೆಂದು ದಾಟಿಹೋದುವು. ಮುಂದಕ್ಕೆ ಹೋದರೆ ಮುಖ್ಯ ರಸ್ತೆ